ಅದಕ್ಕೆ ಎಲ್ಲ ವಿವರಣೆಗಳನ್ನು ಕೊಡುತ್ತೇನೆ. ಎಲ್ಲ ಪ್ರಶ್ನೆಗಳನ್ನು ಒಟ್ಟಿಗೆ ತೆಗೆದುಕೊಂಡರೆ ಉತ್ತರ ವನ್ನು ಕೊಡಲಿಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಬಿ. ಆರ್. ಪಾಟೀಲ್.—ಇಷ್ಟೊಂದು ದುಡ್ಡನ್ನು ಈ ವರ್ಷದಲ್ಲಿ ಖರ್ಚು ಮಾಡಬೇಕಾಗು ತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಬರೇ ದುಡ್ಡನ್ನು ಖರ್ಚು ಮಾಡುವುದೇ ಅಲ್ಲ, ಯೋಜನೆ ಗಳ ಕೆಲಸ ಎಷ್ಟರಮಟ್ಟಿಗೆ ಆಗಿರುತ್ತದೆ ಎಂಬುದನ್ನು ಸಹ ಮಾನ್ಯ ಸಚಿವರು ಹೇಳಿದರೆ ಒಳ್ಳೆಯದು. ಏತಕ್ಕೆಂದರೆ ಅಲ್ಲಿಗೆ ಈಗ ಕೊಡುತ್ತಿರುವ ದುಡ್ಡೆಲ್ಲ ಬರೇ ಕಂಟ್ರಾಕ್ಟರ್ಸ್ ಮತ್ತು ಇಂಜಿನೀಯರ್ಸ್‌ಗಾಗಿ ಪೋಲಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಡಿ ದೇವೇಗೌಡ.—ಈಗಾಗಲೇ ಇದರ ಬಗ್ಗೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. ಮತ್ತೆ ವಿವರಣೆ ಕೊಡಬೇಕೆಂದರೆ ಈ ವರ್ಷ 40 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡ ಬೇಕೆಂದಿರುವುದರಲ್ಲಿ 5.50 ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕಾಗಿ ಖರ್ಚು ಮಾಡಿರುವುದಾಗಿರು ತ್ತದೆ ಬರೇ ಹಣವನ್ನು ಖರ್ಚು ಮಾಡುವುದರಿಂದ ಏನೂ ಆಗುವುದಿಲ್ಲ. ಕೆಲಸ ಆಗಬೇಕಲ್ಲ, ಈ ವರ್ಷ ಒಂದು ಲಕ್ಷ ಎಕರೆಗೆ ಜೂನ್ ಒಳಗೆ ನೀರು ಕೊಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳುತಕ್ಕಂಥ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಂ ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ಮೇಲೆ ನಾನು ಸ್ಪಷ್ಟೀ ಕರಣ ಕೇಳಲಿಕ್ಕೆ ಇಚ್ಛಿಸುತ್ತೇನೆ. ಈ ವರ್ಷ 1983-84ಕ್ಕೆ ಯು. ಕೆ. ಪಿ. ಇಷ್ಟೊಂದು ಹಣವನ್ನು ಒದಗಿಸಿದ್ದರೂ ಕೆಲಸ ಆಗಿಲ್ಲ. ಇನ್ನು ಇದಕ್ಕೆ ಆಗಬೇಕಾದ ಖರ್ಚು ಎಷ್ಟು ? ಕಂಟ್ರಾಕ್ಟರ್ಸ್‌ಗೆ ಆರಿ ಯರ್ಸ್ ಕೊಡಲು ಒಟ್ಟು ಆದಂಥ ಖರ್ಚು ಎಷ್ಟು ಎಂಬುದಕ್ಕೆ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಂಟ್ರಾಕ್ಟರ್ಸ್‌ಗೆ ಪ್ರತ್ಯೇಕವಾಗಿ ಏನು ಹಣವನ್ನು ಕೊಟ್ಟಿಲ್ಲ. ಇದು ಏನಿದ್ದರೂ ವರ್ಕರ್ಸ್‌ಗೆ ಪೆಮೆಂಟ್ ಮಾಡಿರತಕ್ಕಂಥದ್ದಾಗಿರುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಅಲಮಟ್ಟಿ ಯೋಜನೆಯಿಂದ ಮುಳುಗಡೆಯಾಗತಕ್ಕಂಥ ಪ್ರದೇಶ ವೆಷ್ಟು ? ಇದರಲ್ಲಿ ಬಾಗಲಕೋಟೆಯ ಪ್ರದೇಶವು ಮುಳುಗಡೆಯಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ — ಬಾಗಲಕೋಟೆ ಫಸ್ಟ್ ಸ್ಟೇಜ್ ಈಗ ಮುಳುಗಡೆಯಾಗಿದೆ. ಇನ್ನೂ ಹೆಚ್ಚಿಗೆ ಪ್ರದೇಶವನ್ನು ನೀರಾವರಿ ಮಾಡಿದರೆ 30 ಅಡಿ ಫ್ಲಡ್ ವಾಟರ್ ಬರುತ್ತದೆಂದು ಆಂಟಿ ಸಿಪೇಟ್ ಮಾಡಿ we have thought over to shift Bagalkot because during heavy floods, portion of Bagalkot will be affected.

ವಿಷಯ : ದರ್ಕಾಸ್ತು ಜಮೀನಿನಲ್ಲಿ ಮರಗಳನ್ನು ಕಡಿಯುವುದು

ಪ್ರಶ್ನೆ : 167(376) ಶ್ರೀ ಬಾಕೀಲಹುಕ್ರಪ್ಪ (ಸೂಳ್ಯ).— ಮಾನ್ಯ ರಾಜ್ಯ ಅರಣ್ಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸೂಳ್ಯ ತಾಲೂಕಿನಲ್ಲಿ ಹಲವಾರು ಕುಟುಂಬಗಳಿಗೆ ದರಖಾಸ್ತು ಜಮೀನು ಈ ಹಿಂದೆ ಮಂಜೂರು ಆಗಿ ಸುಮಾರು ಹತ್ತು ವರ್ಷಗಳಾದರೂ, ಆ ಸ್ಥಳಗಳಲ್ಲಿ ಮರಗಳನ್ನು ಅರಣ್ಯ ಇಲಾಖೆ ಯವರು ಕಡಿದು ಡಿಪೋಗೆ ಸಾಗಿಸದಿರಲು ಕಾರಣವೇನು ?

ಉತ್ತರ : ಶ್ರೀ ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).— ಕಾರಣಗಳು :

1) ಕೆಲವು ಪ್ರಕರಣಗಳಲ್ಲಿ ವಲಯ ಅರಣ್ಯಾಧಿಕಾರಿಗಳು ದರಖಾಸ್ತುದಾರರಿಗೆ ತಮ್ಮ ಜಾಗ ವನ್ನು ತೋರಿಸಲು ನೋಟೀಸು ಕೊಟ್ಟಿದ್ದಾಗ್ಯೂ, ಅವರು ಜಾಗವನ್ನು ತೋರಿಸಿರುವುದಿಲ್ಲ.

2) ದರಖಾಸ್ತು ಜಮೀನುಗಳು ಚದರಿದ ಪ್ರದೇಶಗಳಲ್ಲಿ ಹಂಚಿಹೋಗಿವೆ ಮತ್ತು ಇದರಲ್ಲಿ ಲಭ್ಯವಿರುವ ಮರಗಳ ಪ್ರಮಾಣ ಅತಿ ಕಡಿಮೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಕಲ್ಲೊಡ್ಡು ಯೋಜನೆ

ಪ್ರಶ್ನೆ : 168(470) ಶ್ರೀ ಬಿ. ಜಿ. ಬಣಕಾರ್ (ಹಿರೇಕೇರೂರು). — ಮಾನ್ಯ ಲೋಕೋಪ ಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಲ್ಲೊಡ್ಡು ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರದ ವಿಸ್ತೀರ್ಣವೆಷ್ಟು ;

ಆ) ಕಲ್ಲೊಡ್ಡು ಯೋಜನೆಯ ಅಂದಾಜು ವೆಚ್ಚವೆಷ್ಟು ;

ಇ) ಕಲ್ಲೊಡ್ಡು ಯೋಜನೆಗೆ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು ;

ಈ) ಕಲ್ಲೊಡ್ಡು ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಅಲ್ಲಿಯ ಜನರು ಎಷ್ಟು ಎಕರೆ